# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

ದೂರವಾಣಿ ಸಂಖ್ಯೆ: 08354-230276/230286
ಮೊ: 9480696389
Email: registrar@uhsbagalkot.edu.in

ಕುಲಸಚಿವರ ಕಾರ್ಯಾಲಯ,
ಉದ್ಯಾನಗಿರಿ, ನವನಗರ
ಬಾಗಲಕೋಟೆ – 587 104

ಸಂಖ್ಯೆ: ಕು/ತೋವಿವಿಬಾ/ನೇ.ವಿ./ಸೇ.ಸಿ.ಮು/2021-22 /677 ದಿನಾಂಕ: 16.11.2021

## ಅಧಿಸೂಚನೆ

ವಿಷಯ: 2020ನೇ ಸಾಲಿನ ಸೇವಾ ಸಿಬ್ಬಂದಿ(ಗ್ರಂಥಾಲಯ ಸಹಾಯಕರ)ಯವರ ಮುಂಬಡ್ತಿಗಾಗಿ ಅರ್ಹತಾ ಪಟ್ಟಿಯನ್ನು ಪ್ರಕಟಿಸುವ ಕುರಿತು

ಉಲ್ಲೇಖ: 1) ದಿನಾಂಕ: 31.12.2020 ರಂದು ಇದ್ದಂತೆ ಶಿಕ್ಷಕೇತರ ಸಿಬ್ಬಂದಿಯ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುವ ಸುತ್ತೋಲೆ ಸಂಖ್ಯೆ: ಕು/ತೋವಿವಿಬಾ/ಜೇ.ಪ./1273/2020-21 ದಿನಾಂಕ:16.03.2021
2) ದಿನಾಂಕ: 27.10.2021 ರಂದು ಜರುಗಿದ 2020 ರ ಗ್ರಂಥಾಲಯ ಸಹಾಯಕರ ಮುಂಬಡ್ತಿ ಪರಿಶೀಲನಾ ಸಮಿತಿಯ ಶಿಫಾರಸ್ಸುಗಳು
3) ಮಾನ್ಯ ಕುಲಪತಿಗಳು, ತೋ.ವಿ.ವಿ., ಬಾಗಲಕೋಟೆ ಇವರ ಅನುಮೋದನೆ ದಿ:16.11.2021.

ತೋ.ವಿ.ವಿ. ಬಾಗಲಕೋಟೆಯ ಗ್ರಂಥಾಲಯ ಸಹಾಯಕ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕೇತರ ಸಿಬ್ಬಂದಿ (ಗ್ರಂಥಾಲಯ ಸಹಾಯಕರ) ಯವರ ಅಂತಿಮ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ(1) ರನ್ವಯ ಈಗಾಗಲೇ ಪ್ರಕಟಿಸಲಾಗಿದೆ. ಮುಂದುವರೆದು, 2020ನೇ ಸಾಲಿಗೆ ಸೇವಾ ಸಿಬ್ಬಂದಿ (ಗ್ರಂಥಾಲಯ ಸಹಾಯಕರ) ಯವರ ಮುಂಬಡ್ತಿಗೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯದಿಂದ ರಚಿಸಲಾದ ಮುಂಬಡ್ತಿ ಪರಿಶೀಲನಾ ಸಮಿತಿಯು ದಿನಾಂಕ: 27.10.2021 ರಂದು ಸಭೆ ಸೇರಿ ಸಹಾಯಕ ಗ್ರಂಥಪಾಲಕರ ವೃಂದದ ಮುಂಬಡ್ತಿಗಾಗಿ ನಿಗದಿಪಡಿಸಿದ ವಿದ್ಯಾರ್ಹತೆ, ಪ್ರಸ್ತಾಪಿತ ಸಿಬ್ಬಂದಿಯ ಅರ್ಹತೆ, ಜೇಷ್ಠತೆ, ಸರಕಾರದ ಆದೇಶಗಳನ್ವಯ ಮೀಸಲಾತಿ ಹಾಗೂ ನೌಕರರ ಗೌಪ್ಯ ವರದಿಗಳು ಇತ್ಯಾದಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿರುತ್ತದೆ. ಅಲ್ಲದೇ, ವಿಶ್ವವಿದ್ಯಾಲಯವು ದಿನಾಂಕ 01.04.2009ರ ಅಧಿಸೂಚನೆಯನುಸಾರ ಅಳವಡಿಸಿಕೊಂಡ ಕೃವಿವಿ, ಧಾರವಾಡ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ **ಸಹಾಯಕ ಗ್ರಂಥಪಾಲಕರ** ಹುದ್ದೆಯ ಮುಂಬಡ್ತಿಗೆ ಶಿಫಾರಸ್ಸು ಮಾಡಿ ರಾಜ್ಯ ಸರ್ಕಾರಿ ವೇತನವನ್ನು ವಿಸ್ತರಿಸಲು ಸಮಿತಿಯು ತೀರ್ಮಾನಿಸಿರುತ್ತದೆ (ಉಲ್ಲೇಖ-2). ಈ ರೀತಿ ಪ್ರಸ್ತಾಪಿತ ಸಿಬ್ಬಂದಿಯನ್ನು ಜೇಷ್ಠತೆ ಆಧಾರದ ಮೇಲೆ ಹಾಗೂ ಪ್ರಸ್ತುತ ವೃಂದದಲ್ಲಿ ಅವರುಗಳು ಕಾರ್ಯನಿರ್ವಹಿಸಿದ ವಾಸ್ತವಿಕ ದಿನಾಂಕದ ಹಾಗೂ ಮೀಸಲಾತಿ ಆಧಾರದ ಮೇಲೆ ಮುಂಬಡ್ತಿಗೆ ಪರಿಗಣಿಸಲು ಶಿಫಾರಸ್ಸು ಮಾಡಿರುತ್ತದೆ. ಈ ಹಿನ್ನಲೆಯಲ್ಲಿ ಮುಂಬಡ್ತಿ ಪರಿಶೀಲನಾ ಸಮಿತಿಯ ಈ ಮೇಲಿನ ಶಿಫಾರಸ್ಸುಗಳನ್ವಯ ಮುಂಬಡ್ತಿಗೆ ಅರ್ಹರಿರುವ ಸಿಬ್ಬಂದಿಯ **"ಅರ್ಹತಾ ಪಟ್ಟಿ"**ಯನ್ನು ಅನುಬಂಧದಲ್ಲಿ ತಿಳಿಸಿರುವಂತೆ ಈ ಮೂಲಕ ಹೊರಡಿಸಿ ಸಂಬಂಧಪಟ್ಟ ಸಿಬ್ಬಂದಿಗಳ ಗಮನಕ್ಕೆ ತರಲಾಗಿದೆ. ಸದರಿ ಅರ್ಹತಾ ಪಟ್ಟಿಯು ತೋ.ವಿ.ವಿ. ಬಾಗಲಕೋಟೆಯ ಅಂತರ್ಜಾಲ **https://uhsbagalkot.karnataka.gov.in** ನಲ್ಲಿಯೂ ಲಭ್ಯವಿರುತ್ತದೆ.

ಸದರಿ ಅರ್ಹತಾ ಪಟ್ಟಿಯಿಂದಾಗಿ ಯಾವುದೇ ಸಿಬ್ಬಂದಿಯವರು ಬಾಧಿತರಾಗಿದ್ದಲ್ಲಿ, ಈ ಅಧಿಸೂಚನೆ ಹೊರಡಿಸಿದ 15 ದಿವಸದೊಳಗಾಗಿ ಮೇಲ್ಮನವಿಯನ್ನು ಮಾನ್ಯ ಕುಲಪತಿಗಳು, ತೋ.ವಿ.ವಿ., ಬಾಗಲಕೋಟೆ, ಇವರಿಗೆ ಸಲ್ಲಿಸತಕ್ಕದ್ದು. ನಿಗದಿಪಡಿಸಿದ ದಿನಾಂಕದ ನಂತರ ಸ್ವೀಕೃತಗೊಂಡ ಯಾವುದೇ ಮೇಲ್ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

ಆದೇಶದ ಮೇರೆಗೆ,

ಕುಲಸಚಿವರು
ತೋ.ವಿ.ವಿ., ಬಾಗಲಕೋಟೆ

ಕುಲಸಚಿವರು,
ತೋ.ವಿ.ವಿ. ಬಾಗಲಕೋಟೆ

ಗೆ,

ವಿಶ್ವವಿದ್ಯಾಲಯದ ಎಲ್ಲ ಅಧಿಕಾರಿಗಳು.
ಡೀನ್‌ಗಳು, ತೋಟಗಾರಿಕೆ ಮಹಾವಿದ್ಯಾಲಯಗಳು, ತೋ.ವಿ.ವಿ., ಬಾಗಲಕೋಟೆ.
ಸಹ ಸಂಶೋಧನಾ ವಿಸ್ತರಣಾ ನಿರ್ದೇಶಕರು, ಎಮ್.ಎಚ್.ಆರ್.ಈ.ಸಿ., ತೋ.ವಿ.ವಿ., ಬಾಗಲಕೋಟೆ.
ಮುಖ್ಯಸ್ಥರು, ತೋಟಗಾರಿಕೆ ಸಂಶೋಧನಾ ಹಾಗೂ ವಿಸ್ತರಣಾ ಘಟಕಗಳು, ತೋ.ವಿ.ವಿ., ಬಾಗಲಕೋಟೆ.
ಮುಖ್ಯಸ್ಥರು, ತೋಟಗಾರಿಕೆ ವಿಸ್ತರಣಾ ಶಿಕ್ಷಣ ಘಟಕ ಕೇಂದ್ರಗಳು, ತೋ.ವಿ.ವಿ., ಬಾಗಲಕೋಟೆ.
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ.

} ಇವರುಗಳಿಗೆ ಮಾಹಿತಿಗಾಗಿ ಹಾಗೂ ಸಂಬಂಧಪಟ್ಟ ಸಿಬ್ಬಂದಿಯವರ ಗಮನಕ್ಕೆ ತರಲು ಕೋರಿದೆ.

ಪ್ರತಿ: ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತೋ.ವಿ.ವಿ., ಬಾಗಲಕೋಟೆ.

ಅನುಬಂಧ

## ಮಿಕ್ಕುಳಿದ ಮಾತ್ರ ವೃಂದದಡಿ ಮುಂಬಡ್ತಿ ಅರ್ಹತಾ ಪಟ್ಟಿ

(ಈ ಕಛೇರಿ ಅಧಿಸೂಚನೆ ಸಂಖ್ಯೆ: ಕು/ತೋವಿವಿಬಾ/ನೇ.ವಿ./ಸೇ.ಪಿ.ಬಡ್ತಿ–2020/ /2021–22 ದಿನಾಂಕ: 16.11.2021)

ಗ್ರಂಥಾಲಯ ಸಹಾಯಕರ ಹುದ್ದೆಯಿಂದ ಸಹಾಯಕ ಗ್ರಂಥಪಾಲಕ ಹುದ್ದೆಗೆ ಮುಂಬಡ್ತಿಗೆ ಅರ್ಹರಿರುವ ಸಿಬ್ಬಂದಿಗಳು

| ಕ್ರ.ಸಂ. | ಹೆಸರು ಮತ್ತು ವಿದ್ಯಾರ್ಹತೆ | ಕೆಲಸದ ಸ್ಥಳ | ಜನ್ಮ ದಿನಾಂಕ | ತೋವಿವಿ,ಗೆ ಸೇರಿದ ದಿನಾಂಕ | ಪ್ರಸಕ್ತ ಹುದ್ದೆಗೆ ಸೇರಿದ ದಿನಾಂಕ | ಷರಾ |
|---|---|---|---|---|---|---|
| 1 | ಶ್ರೀ ಶಿವಲಿಂಗಪ್ಪ ಕೋಟಿ<br>ಬಿ.ಎ, ಎಂ.ಎಲ್.ಐ.ಎಸ್.ಸಿ, ಕಂಪ್ಯೂಟರ್ ಟ್ರೇನಿಂಗ್, ಅಕೌಂಟ್ಸ್ ಹೈಯರ್, ಜನರಲ್ ಲಾ I & II, ಕೆಸೆಟ್, ನೆಟ್ | ತೋಮವಿ, ಬೆಂಗಳೂರು | 17.02.84 | 13.12.11 | 13.12.11 | |
| 2 | ಶ್ರೀ ಅಶೋಕ ದೊಡ್ಡಮನಿ (ಪ.ಜಾ)<br>ಬಿ.ಎ, ಎಂ.ಎಲ್.ಐ.ಎಸ್.ಸಿ, ಎಂ.ಫಿಲ್, ಕಂಪ್ಯೂಟರ್ ಟ್ರೇನಿಂಗ್ | ತೋಮವಿ, ಕೊಪ್ಪಳ | 01.01.85 | 25.01.12 | 25.01.12 | |
| 3 | ಶ್ರೀ ಕನಕಪ್ಪ ಈ. ನರಸನಾಯ್ಕರ (ಪ.ಪಂ)<br>ಬಿ.ಎ, ಎಂ.ಎಲ್.ಐ.ಎಸ್.ಸಿ, ಕೆಸೆಟ್, ನೆಟ್ | ಗ್ರಂಥಾಲಯ, ತೋವಿವಿ, ಬಾಗಲಕೋಟೆ | 20.07.83 | 22.02.12 | 22.02.12 | |

ಕುಲಸಚಿವರು,
ತೋ.ವಿ.ವಿ., ಬಾಗಲಕೋಟೆ

ಕುಲಸಚಿವರು,
ತೋ.ವಿ.ವಿ. ಬಾಗಲಕೋಟೆ